# 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು

**ಸಿ.ಸಿ.ನಂ. 1439/2021**

| | | |
|---|---|---|
| ಹೆಸರುಃ | ಡಾ. ನಾಗೇಶ್ | ಚಾಸಾ-6 ಪ್ರಾಸಾ-2 |
| ತಂದೆಯ ಹೆಸರುಃ | ಆಂಜಿನಪ್ಪ | ಸಾಕ್ಷಿಯನ್ನು ದಿಃ 16.10.2025 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 32 ವರ್ಷ | |
| ಉದ್ಯೋಗಃ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | |
| ವಾಸಸ್ಥಳಃ | ವೇಮಗಲ್ | |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು ಮಾಸ್ತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಿಃ 07-09-2018 ರಿಂದ 23.08.2023 ರವರೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದೇನೆ.

ದಿಃ 07.07.2021 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಚಾಸಾ.1 ರವರು ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಲ್ಲೆಯ ಹಿನ್ನೆಲೆಯಲ್ಲಿ ಬಂದಿದ್ದರು. ನಮ್ಮ ಸ್ಟಾಫ್ ನರ್ಸ್ ಲಕ್ಷ್ಮಮ್ಮ ರವರು ಅವರನ್ನು ಪರೀಕ್ಕೆ ಮಾಡಿ ಚಾಸಾ.1 ರವರನ್ನು ಕಳುಹಿಸಿದ್ದರು. ನಂತರ ಮಾರನೆಯ ದಿನ ಮದ್ಯಾಹ್ನ 2.34 ಸಮಯಕ್ಕೆ ನಾನು ಚಾಸಾ.1 ರವರನ್ನು ಪರೀಕ್ಷೆ ಮಾಡಿದ್ದೇನೆ.

<u>ಗಾಯಗಳ ವಿವರಃ</u>

1. ಹಣೆಯ ಮೇಲೆ ಮುಟ್ಟಿದರೆ ನೋವಾಗುವ ಅನುಭವ.
2. ಎಡ ತಲೆಯ ಕಿವಿಯ ಮೇಲೆ ಹರಿತದ ರಕ್ತಗಾಯ.

ಇವೆರಡೂ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು. ಸಾಕ್ಷಿಯು ಗಾಯದ ಪ್ರಮಾಣ ಪತ್ರದಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿದಂತಹ ಗಾಯ ಮಚ್ಚಿನ ತುದಿಯಿಂದ ಆಗಬಹುದಾದಂತಹ ಗಾಯ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಆರ್. ವಕೀಲರಿಂದಃ</u>

ಸಾಮಾನ್ಯವಾಗಿ ಮೇಲೆ ಹೇಳಿದ ಗಾಯಗಳು ಜಲ್ಲಿ ಕಲ್ಲುಗಳಿರುವ ರಸ್ತೆಯಲ್ಲಿ ಗಾಡಿಯಿಂದ ಬಿದ್ದರೆ ಮೇಲೆ ಹೇಳಿದ ಗಾಯಗಳು ಆಗುತ್ತದೆ ಎಂದರೆ ಸರಿಯಲ್ಲ. ಚೂಪಾದ ಕಲ್ಲಿನ ಮೇಲೆ ಬಿದ್ದರೆ ಮೇಲೆ ಹೇಳಿದಂತಹ ಗಾಯಗಳು ಆಗಬಹುದು ಎಂದರೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ. ದಿಃ 07.07.2021 ರಂದು ನೀವು ಚಿಕಿತ್ಸೆ ನೀಡಿಲ್ಲ, ಸಂಜೆ 7.00 ಗಂಟೆ ಸಮಯದಲ್ಲಿ, ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ನ್ನು ನಾನೇ ಬರೆದಿದ್ದೇನೆ. ದಿಃ 07.07.2021 ರಂದು ಚಾಸಾ.1 ರವರು ಚಿಕಿತ್ಸೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ 07.07.2021 ರಂದು ನೀವು ನಿಪಿ.2 ಗಾಯದ ಪ್ರಮಾಣ ಪತ್ರವನ್ನು ಬರೆದಿಲ್ಲ ಎಂದರೆ ಸಾಕ್ಷಿಯು ನನಗೆ ಪೊಲೀಸರು ದಿಃ 29.07.2021 ರಂದು ಗಾಯದ ಪ್ರಮಾಣ ಪತ್ರಕ್ಕಾಗಿ ರಿಕ್ವಿಸಿಶನ್ ನೀಡಿದ್ದಾರೆ, ನಾನು ದಿಃ 29.07.2021 ರಂದು ಗಾಯದ ಪ್ರಮಾಣ ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ನಿಪಿ.2 ನ್ನು ಬರೆದಿದ್ದೀರ ಎಂದರೆ ಓ.ಪಿ.ಡಿ ರಿಜಿಷ್ಟರ್‌ನಲ್ಲಿ ನಾವು ನಮೂದಿಸಿರುತ್ತೇವೆ, ಅದನ್ನು ನೋಡಿ ನಾನು ನಿಪಿ.2 ನ್ನು ಬರೆದಿದ್ದೇನೆ ಎಂದು ನುಡಿಯುತ್ತಾರೆ. ನಿಪಿ.2 ರಲ್ಲಿ 5.00 ಗಂಟೆ ಎಂದು ಬರೆದಿರುವುದು 7.00 ಗಂಟೆ ಎಂದು ತಿದ್ದಿದ್ದೀರ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**Sd/-**
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು